ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರುಗಳು ಏನು ಹೇಳುತ್ತಿದ್ದಾರೆ ಇದು ಸರಿಯಲ್ಲ. ಕೆಲವು ಕಡೆಗಳಲ್ಲಿ, ಕೆಲವು ರೂಟುಗಳಲ್ಲಿ, ಕೆಲವು ಸೀಸನ್‌ಗಳಲ್ಲಿ ಖಾಸಗಿಯವರಿಗೆ ನಾವು ಮಿನಿಮಮ್ ಅಂಡ್ ಮ್ಯಾಕ್ಸಿಮಮ್ ಎಂದು ಹೇಳಿಬಿಟ್ಟು ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್‌ನಿಂದ, ಟ್ರಾನ್ಸ್‌ಪೋರ್ಟ್ ಡಿಪಾರ್ಟಮೆಂಟ್‌ನಿಂದ ರೇಟ್‌ನ್ನು ಸರ್ಕಾರದಿಂದ ಫಿಕ್ಸ್ ಮಾಡಿರುತ್ತೇವೆ. ಇಷ್ಟು ಮಿನಿಮಮ್, ಇದಕ್ಕಿಂತ ಹೆಚ್ಚು ನೀವು ಹೋಗಬಾರದು ಎಂದು ಹೇಳಿರುತ್ತೇವೆ. ಹೀಗಾಗಿ ಸ್ವಲ್ಪ ವೇರಿಯೇಷನ್ಸ್ ಇದ್ದೇ ಇರುತ್ತದೆ. ಅದು ಏನೂ ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ಕೆ. ಜಯರಾಮಶೆಟ್ಟಿ:- ಅಧ್ಯಕ್ಷರೇ, ಈಗ ಉಡುಪಿಯಿಂದ ಮಂಗಳೂರಿಗೆ ಹೋಗುವಂಥ ಬೇಕಾದಷ್ಟು ಖಾಸಗಿ ಬಸ್ಸುಗಳು ಇವೆ. ಹಾಗೆಯೇ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳೂ ಇವೆ. ಖಾಸಗಿ ಬಸ್ಸಿಗೂ ಕೆ.ಎಸ್.ಆರ್.ಟಿ.ಸಿ. ಬಸ್ಸಿಗೂ ಉಡುಪಿಯಿಂದ ಮಂಗಳೂರಿಗೆ ಹೋಗುವ ಬಸ್ಸುಗಳಲ್ಲಿ ಮೂರು-ನಾಲ್ಕು ರೂಪಾಯಿಗಳ ವ್ಯತ್ಯಾಸ ಇದೆ.

ಅಧ್ಯಕ್ಷರು:- ನಿಮಗೆ ಗೊತ್ತಿದೆ. ಕಾರಣಗಳು ಹಲವಾರು ಇವೆ. ಗುಲ್ಬರ್ಗಾದಿಂದ ಯಾದ್ಗೀರ್‌ರೆಗೆ ಉಡುಪಿ ಬಸ್ಸು ಹೋಗುವುದಿಲ್ಲ. ಹೌದೇ? ಆಲ್ಲಿ ಕೆ.ಎಸ್.ಆರ್.ಟಿ.ಸಿ. ಯವರು ಬಸ್ಸುಗಳನ್ನು ಓಡಿಸಬೇಕು. ಅವರಿಗೆ ಜವಾಬ್ದಾರಿ ಇದೆ. That is a Public Undertaking ಅವರು ಸಂಬಳಕೊಟ್ಟಷ್ಟು ಇವರ ಕೊಡುವುದಿಲ್ಲ. ಅಮೇಲೆ ಕೆಟ್ಟುಹೋದರೂ, ಆಕ್ಸಿಡೆಂಟ್ ಆದರೂ, ಎಂಪ್ಲಾಯೀಸ್‌ಗೆ ತೊಂದರೆಯಾದರೂ ಅವರು ಕಾಂಪೆನ್‌ಸೇಷನ್ ಕೊಡಬೇಕಾಗುತ್ತದೆ. ಖಾಸಗಿಯವರು ಕೊಟ್ಟರೂ ನಡೆಯುತ್ತದೆ, ಕೊಡದಿದ್ದರೂ ನಡೆಯುತ್ತದೆ. ಓವರ್‌ಹೆಡ್ ಚಾರ್ಜಸ್ ಇಲ್ಲಿ ಜಾಸ್ತಿ ಬರುತ್ತದೆ. ಒಂದು ಅಂಡರ್‌ಟೇಕಿಂಗ್‌ನಿಂದ ನಡೆಸುವುದಕ್ಕೂ, ಅದಕ್ಕೂ ವ್ಯತ್ಯಾಸ ಆಗುತ್ತದೆ. ಅವರು ಅಲ್ಲಲ್ಲಿಯೇ ಓಡಿಸಿಕೊಳ್ಳುವುದು ತಾನೇ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ವ್ಯತ್ಯಾಸ ಇರುವುದು ಕೆಲವು ಕಡೆಗಳಲ್ಲಿ ಮಾತ್ರ. ನಾವು ವೆರಿಫೈ ಮಾಡಿದಾಗ ಬಹುತೇಕ ಕಡೆಗಳಲ್ಲಿ ಖಾಸಗಿ ಬಸ್ಸುಗಳ ರೇಟೇ ಕೆ.ಎಸ್.ಆರ್.ಟಿ.ಸಿ. ಬಸ್ಸು ರೇಟುಗಳಿಗಿಂತ ಜಾಸ್ತಿ ಇದೆ.

1996-97ನೇ ಸಾಲಿನ ಆಶ್ರಯ ಯೋಜನೆಯ ಮನೆಗಳು

55(121) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿಗೆ ಆಶ್ರಯ ಯೋಜನೆಯಡಿಯಲ್ಲಿ ಜಿಲ್ಲಾವಾರು ನಿಗದಿ ಮಾಡಿದ ಮನೆಗಳ ಸಂಖ್ಯೆ ಎಷ್ಟು; ಅದಕ್ಕೆ ಬೇಕಾದ ಹಣ ಎಷ್ಟು?

ಆ) 31-1-98ರವರೆಗೆ ಜಿಲ್ಲಾವಾರು ಬಿಡುಗಡೆ ಮಾಡಿದ ಹಣ ಎಷ್ಟು; ಖರ್ಚಾದ ಹಣ ಎಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) 1996-97ನೇ ಸಾಲಿಗೆ ಜಿಲ್ಲಾವಾರು ನೀಡಲಾದ 40,000 ಮನೆಗಳನ್ನು ಹಾಗೂ ಅದಕ್ಕೆ ಬೇಕಾದ ಹಣದ ವಿವರಗಳನ್ನು ಸಹ ಅನುಬಂಧದಲ್ಲಿ ನೀಡಲಾಗಿದೆ.

ಆ) ಮೇಲ್ಕಂಡ ಮನೆಗಳಿಗೆ 31-1-98 ರವರೆಗೆ ಬಿಡುಗಡೆ ಮಾಡಲಾದ ಹಣ ರೂ. 58.00 ಕೋಟಿ ಜಿಲ್ಲಾವಾರು ಬಿಡುಗಡೆ ಹಣ ಹಾಗೂ ಖರ್ಚಾದ ಹಣದ ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ANNEXURE

(Fin: In Nos.)

(Rs. in lakhs)

Sl. No.	District	PHY, Target (96-97)	FIN, Requirement	Released as on 31st Jan 1998	Expenditure incurred as on 31st Jan. 1998
1	2	3	4	5	6
1.	Bangalore (R)	3320	664.00	512.04	512.04
2.	Bangalore (U)	400	80.00	30.44	30.44
3.	Chitradurga	2050	410.00	291.19	291.19
4.	Kolar	3020	604.00	428.52	428.52
5.	Shimoga	1670	334.00	223.16	223.16
6.	Tumkur	2320	464.00	340.31	340.31
7.	Mysore	2985	597.00	426.07	426.07
8.	Chickmagalur	1265	253.00	205.19	205.19
9.	D. Kannada	1530	306.00	252.51	252.51
10.	Hassan	3600	720.00	531.06	531.06
11.	Kodagu	280	56.00	65.30	65.30
12.	Mandya	2190	438.00	301.46	301.46
13.	Belgaum	2285	457.00	369.18	369.18

1	2	3	4	5	6
14.	Bijapur	1855	371.00	254.01	254.01
15.	Dharwad	3180	636.00	453.63	453.63
16.	U. Kannada	1130	226.00	175.25	175.25
17.	Gulbarga	2270	454.00	330.96	330.96
18.	Bidar	1065	213.00	131.00	131.00
19.	Bellary	1645	329.00	269.44	269.44
20.	Raichur	1940	388.00	238.62	238.62
	Total	40000	8000.00	5829.31	5829.31

ಶ್ರೀ ಯು.ಬಿ. ಬಣಕಾರ್:- ಮಾನ್ಯ ಅಧ್ಯಕ್ಷರೇ, 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ ರಾಜ್ಯಸರ್ಕಾರ 40 ಸಾವಿರ ಮನೆಗಳನ್ನು ಕಟ್ಟಲಿಕ್ಕೆ 80 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿತ್ತು. ಆದರೆ ನಾವು 1996-97ನೇ ಇಸವಿಯನ್ನು ಮುಗಿಸಿ ಈಗ 1997-98ನೇ ಸಾಲಿನ ಅಂತ್ಯಕ್ಕೆ ಬಂದಿದ್ದೇವೆ. ಆದರೆ ದುರ್ದೈವದಿಂದ 1996-97ನೇ ಸಾಲಿನಲ್ಲಿ ಪ್ರಾರಂಭವಾದಂಥ ಮನೆಗಳ ಬಗ್ಗೆ ರಾಜ್ಯಸರ್ಕಾರ ಇನ್ನು 21 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ನನ್ನ ಧಾರವಾಡ ಜಿಲ್ಲೆಗೆ ಇನ್ನೂ 1,82,37,000 ರೂ. ಗಳನ್ನು ಸರ್ಕಾರ ಬಿಡುಗಡೆ ಮಾಡಬೇಕಾಗಿದೆ. ದಿನನಿತ್ಯ ಫಲಾನುಭವಿಗಳು ಈ ಹಣಕ್ಕಾಗಿ ತಾಲ್ಲೂಕು ಕಛೇರಿಗೆ ಅಲೆದಾಡುತ್ತಿದ್ದಾರೆ. ದಯವಿಟ್ಟು ಒಂದೂವರೆ ವರ್ಷದ ಹಿಂದೆ ಮುಗಿಯಬೇಕಾಗಿದ್ದ ಈ ಮನೆಗಳಿಗೆ ಕೂಡಲೇ ಹಣವನ್ನು ಬಿಡುಗಡೆ ಮಾಡಲು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಸಭಾಧ್ಯಕ್ಷರೇ, ಧಾರವಾಡ ಜಿಲ್ಲೆಯಲ್ಲಿ ಸುಮಾರು 6 ಕೋಟಿ 36 ಲಕ್ಷ ರೂಪಾಯಿಗಳನ್ನು ನೀಡಲಾಗಿತ್ತು. ಅದರಲ್ಲಿ 4 ಕೋಟಿ 53 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಷ್ಟೋ ಹಣವನ್ನು ಖರ್ಚುಮಾಡಿದ್ದಾರೆ. ಉಳಿದ ಬಾಕಿ ಹಣವನ್ನು ಕೂಡಲೇ ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಯು.ಬಿ. ಬಣಕಾರ್:- ಜನರು ದಿನನಿತ್ಯ ಗಂಟುಬೀಳುತ್ತಾರೆ. ಈ ಮನೆಗಳು ಒಂದು ವರ್ಷದ ಹಿಂದೆಯೇ ಮುಗಿಯಬೇಕಾಗಿದ್ದವು. ಆದ್ದರಿಂದ ಎಷ್ಟು ದಿವಸಗಳಲ್ಲಿ ಹಣ ಕೊಡುತ್ತೇವೆ ಎಂದು ಖಡಾಖಂಡಿತವಾಗಿ ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ:- ಕೂಡಲೇ ಎಂದರೆ ನಮ್ಮ ಬಜೆಟ್‌ನಲ್ಲಿ ಏನು ಪ್ರಾವಿಷನ್ ಇದೆ, ಅದನ್ನು ಮಾರ್ಚ್ 31ರೊಳಗಡೆ ಬಿಡುಗಡೆ ಮಾಡುತ್ತೇವೆ.

ಶ್ರೀ ಯು.ಬಿ. ಬಣಕಾರ್:- ಸಭಾಧ್ಯಕ್ಷರೇ, ನಾವು ಈಗ 1997-98ನೇ ಸಾಲಿನ ಅಂತ್ಯದಲ್ಲಿದ್ದೇವೆ. ನಮಗೆ 1997-98ನೇ ಸಾಲಿನ ಹಣ ಕೊಡುವುದನ್ನು ಬೇಕಾದರೆ ತಡಮಾಡಲಿ. 1996-97 ರದ್ದು ಹಣ ಇನ್ನು ಎಷ್ಟು ದಿವಸಗಳಲ್ಲಿ ನಮಗೆ ಕೊಡಿಸುತ್ತಾರೆ? ನಿರ್ದಿಷ್ಟವಾಗಿ ನಮಗೆ ಹೇಳಬೇಕು.

ಅಧ್ಯಕ್ಷರು:- ಹಣ ಬಂದ ತಕ್ಷಣ ಬಿಡುಗಡೆ ಮಾಡುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ:- ಫೈನಾನ್ಸ್‌ನಿಂದ ಹಣ ಬಂದ ತಕ್ಷಣ ಬಿಡುಗಡೆ ಮಾಡುತ್ತೇವೆ.

ಶ್ರೀ ಯು.ಬಿ. ಬಣಕಾರ್:- ನಾವು ಊರಿಗೆ ಹೋದರೆ ಫಲಾನುಭವಿಗಳು ದಿನನಿತ್ಯ ನಮ್ಮನ್ನು ಕಾಡುತ್ತಾರೆ.

ಅಧ್ಯಕ್ಷರು:- ಊರಿನವರೆಲ್ಲಾ ನಿಮ್ಮನ್ನು ಹಿಡಿದುಕೊಳ್ಳುತ್ತಾರೆ ಎಂದು ನೀವು ಇವರನ್ನು ಕೇಳಿದರೆ ಫೈನಾನ್ಸ್‌ನವರು ದುಡ್ಡು ಕೊಡಬೇಕು. ಪಾಪ, ಅವರೇನು ಮನೆಯಲ್ಲಿಟ್ಟುಕೊಂಡಿರುತ್ತಾರೆಯೇ?

ಶ್ರೀ ಯು.ಬಿ. ಬಣಕಾರ್:- ನಮ್ಮ ಹಿರೆಕೆರೂರು ತಾಲ್ಲೂಕಿಗಾದರೂ ಕೊಡಲಿ. ರಾಜ್ಯದ್ದು ಅವರು ಏನು ಬೇಕಾದರೂ ಮಾಡಲಿ. ನಮ್ಮ ತಾಲ್ಲೂಕಿನದಾದರೂ ಕೊಡಲಿಕ್ಕೆ ಹೇಳಿ. ನಮಗೆ ಬಹಳ ತೊಂದರೆ ಇದೆ. ದಿನನಿತ್ಯ ಫಲಾನುಭವಿಗಳು ನಮ್ಮನ್ನು ಕಾಡುತ್ತಾರೆ. ದಯವಿಟ್ಟು ನಿರ್ದಿಷ್ಟವಾಗಿ ತಿಳಿಸಿ.

ಅಧ್ಯಕ್ಷರು:- ಬಸವರಾಜು ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಹೆಚ್.ಡಿ. ಬಸವರಾಜು:- ಸಭಾಧ್ಯಕ್ಷರೇ, ಈ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ಪ್ರತಿವಿಧಾನಸಭಾ ಕ್ಷೇತ್ರಕ್ಕೆ ದುಡ್ಡು ಇಡುತ್ತಾರೆ.

ಅಧ್ಯಕ್ಷರು:- ಇದು ಕೊಳಚೆ ಅಲ್ಲ.

ಶ್ರೀ ಹೆಚ್.ಡಿ. ಬಸವರಾಜು:- ವಸತಿ ಬಗ್ಗೆ ಕೂಡ ನಾನು ಹೇಳುತ್ತಿದ್ದೇನೆ. ಅದನ್ನು ಕೇಳಿ ಇದನ್ನು ಕೇಳೋಣ ಅಂದುಕೊಂಡಿದ್ದೆ. ವಸತಿ ಬಗ್ಗೆಯೇ ನಾನು ಮಾತನಾಡುತ್ತೇನೆ.

ಅಧ್ಯಕ್ಷರು:- ಮಾತನಾಡಬೇಕಾಗಿಲ್ಲ. ಉಪಪ್ರಶ್ನೆ ಕೇಳಿ.

ಶ್ರೀ ಹೆಚ್.ಡಿ. ಬಸವರಾಜು:- ಸಭಾಧ್ಯಕ್ಷರೇ ಈ ಒಂದು ಸದನದಲ್ಲಿ ಮಾನ್ಯ ಸಚಿವರು ಆಶ್ರಯ ಸಮಿತಿಯ ವತಿಯಿಂದ ನೇಮಕ ಮಾಡುವಂಥ ಸದಸ್ಯರನ್ನು, ನೇಮಕ ಮಾಡುವಂಥ ಸಂದರ್ಭದಲ್ಲಿ ಹಣ ಬಿಡುಗಡೆ ಆಗಿಲ್ಲ.

ಅಧ್ಯಕ್ಷರು:- ಅದು ಬೇರೆ ಪ್ರಶ್ನೆಯಾಯಿತು ಬಿಡಿ. ಪ್ರೊಸೀಡಿಂಗ್ಸ್‌ನ್ನು ನೀವು ಗಮನಿಸಿಲ್ಲ. ಸ್ವಲ್ಪ ಅಲರ್ಟ್ ಆಗಿ ಇರಬೇಕಪ್ಪ. ಹೌಸ್‌ನಲ್ಲಿ ಏನು ಕ್ವೊಶ್ಚನ್ ಡಿಬೇಟ್ ಆಗುತ್ತದೆ ಎಂಬುದನ್ನು ನೋಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೇ, ಇದರಂತೆ 1995-96ನೇ ಸಾಲಿಗೆ ಇನ್ನೂ ಇವರು ಆಶ್ರಯ ಮನೆಗಳಿಗೆ ಹಣ ಬಿಡುಗಡೆ ಮಾಡಿಲ್ಲ. 1997-98 ರಂದು ನಾವು ಚರ್ಚೆ ಮಾಡುತ್ತಿದ್ದೇವೆ. ಆದರೆ 1995-96 ರಂದು ಕೂಡ ಆಶ್ರಯ ಮನೆಗಳಿಗೆ ಹಣ ಬಿಡುಗಡೆ ಮಾಡದೆಯೇ ಅವುಗಳು ಪೂರ್ತಿಯಾಗದೆ ಉಳಿದುಕೊಂಡಿವೆ. ಅವರ ಸ್ಥಿತಿ ಏನಾಗಬೇಕು ಎನ್ನುವುದು ಒಂದು. ಮಾನ್ಯ ಬಸವಮಾಜು ಅವರು ಕೇಳಿದ್ದು ಪ್ರಸ್ತುತವಾಗಿಯೇ ಇದೆ. ಆಶ್ರಯ ಸಮಿತಿಗೆ ಸದಸ್ಯರೊಬ್ಬರನ್ನು ನೀವು ಎಂ.ಎಲ್.ಎ. ಗಳು ಹೇಳಿದವರನ್ನು ಮಾಡುತ್ತೇವೆ, ನೀವು ಕಮಿಟಿಗಳನ್ನು ಮಾಡಿಕೊಂಡು ಹೋಗಿ ಎಂದು ಹೇಳಿ ಇವತ್ತಿನವರೆಗೆ ಈ ಸಭೆಗೆ ಅವರು ಗೌರವ ಕೊಟ್ಟಿಲ್ಲ. ಮೂರು-ಮೂರು ಜನರನ್ನು ಅವರ ಪಾರ್ಟಿಯವರನ್ನೇ ಮಾಡಿಕೊಂಡು ಕಾರ್ಯಕ್ರಮಗಳನ್ನು ಸ್ಥಗಿತ ಮಾಡಿದ್ದಾರೆ.

ಅಧ್ಯಕ್ಷರು:- ಅದು ಬೇರೆ ಆಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ:- ಕೆಲಸ ನಡೆಯಬೇಕಲ್ಲ ಆಶ್ರಯ ಸಮಿತಿಗಳಲ್ಲಿ?

ಅಧ್ಯಕ್ಷರು:- ಇಲ್ಲ, ಪ್ರಶ್ನೋತ್ತರ ವೇಳೆಯಲ್ಲಿ - we will confine to the question regarding the releases made under this scheme.

ಈಗ ತಾವೇನೂ ಹೇಳುತ್ತೀರಿ? ಅದು 1995-96 ರಂದು ಬಂದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ:- 1995-96ರಲ್ಲಿ ಏನು ಬಜೆಟ್‌ನಲ್ಲಿ ಇತ್ತೋ, ಅಷ್ಟೋ ಹಣವನ್ನು ಬಿಡುಗಡೆ ಮಾಡಿದ್ದೇವೆ. ಬೇಕಾದರೆ ತೆಗೆಸಿ ನೋಡಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಅಧ್ಯಕ್ಷರೇ, ಹಾಗಾದರೆ ಕೊಡುವುದಿಲ್ಲವೇನು? ಹಿಂದೆ 1994-95, 1995-96ರಂದು ಮತ್ತು 1996-97ರಂದ್ದು ಹಣವೇ ಬಂದಿಲ್ಲ.

ಅಧ್ಯಕ್ಷರು:- ಮಂತ್ರಿಗಳು ಏನು ಹೇಳಿದರು ಎಂದರೆ, 1995-96 ರಂದು ಬಜೆಟ್‌ನಲ್ಲಿ ಏನು ಪ್ರಾವಿಷನ್ ಮಾಡಿದ್ದರು. ಅಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಿಯಾದರೂ ಬಂದಿಲ್ಲ ಅಂತ ನಿರ್ದಿಷ್ಟವಾಗಿ ನನ್ನ ಗಮನಕ್ಕೆ ತಂದರೆ ನಾನು ವಿಚಾರಣೆ ಮಾಡುತ್ತೇನೆ ಎಂದು ಅವರು ಹೇಳಿದರು.

ಶ್ರೀ ಕೆ.ಎಸ್. ಈಶ್ವರಪ್ಪ:- ಇದು ಇವತ್ತಿನ ಪ್ರಶ್ನೆಯಲ್ಲಿ, ಅಧ್ಯಕ್ಷರೇ, ಪ್ರತಿ ಅಧಿವೇಶನದಲ್ಲೂ ಇದು ಬರುತ್ತಿದ್ದು, ಇದೇ ಉತ್ತರವನ್ನು ಕೊಡುತ್ತಾರೆ. ಹೀಗಾಗಿ 1994-95, 1996-97 ರಂದು ಬಾಕಿ ಇರುವುದನ್ನು ಯಾವಾಗ ಕೊಡುತ್ತೀರಿ ಹೇಳಿ. ಫೈನಾನ್ಸ್ ಡಿಪಾರ್ಟ್‌ಮೆಂಟ್ ನಿಂದ ಬರುತ್ತದೆ ಎಂದರೆ, ಅದು ಬದುಕಿದೆಯೋ ಇಲ್ಲವೋ ಎಂಬುದು ನಮಗೆ ಗೊತ್ತಿಲ್ಲ. ಸರ್ಕಾರ ಬದುಕಿದೆಯೋ ಗೊತ್ತಿಲ್ಲ. ಫಲಾನುಭವಿಗಳಿಗೆ ನಾವು ಏನು ಉತ್ತರ ಕೊಡಬೇಕು? ಹಳ್ಳಿಗೆ ಹೋದ ಕೂಡಲೇ ಜನರು ನಮ್ಮನ್ನು ಕೇಳುತ್ತಾರೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರನ್ನು ಕಾಯಬೇಕು ಎಂದು ನಾವು ಅವರಿಗೆ ಹೇಳುವುದಕ್ಕೆ ಬರುತ್ತದೇನು?

ಅಧ್ಯಕ್ಷರು:- ಹೇಳಿ, ಬಡತನದಲ್ಲಿ ಬದುಕಿದೆ. ಹಣ ಬರುವುದು ಸ್ವಲ್ಪ ತಡವಾಗುತ್ತದೆ. ಬಂದತಕ್ಷಣ ಕೊಟ್ಟು ಬಿಡುತ್ತಾರೆ ಎಂದು.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಸಭಾಧ್ಯಕ್ಷರೇ, ಏತಕ್ಕೋಸ್ಕರ ಹಣ ಬಂದಿಲ್ಲ ಎಂದರೆ, 10 ಸಾವಿರ ರೂಪಾಯಿ ಸಬ್ಸಿಡಿಯನ್ನು ರಾಜ್ಯ ಸರ್ಕಾರದಿಂದ ಕೊಡಬೇಕು. 10 ಸಾವಿರವನ್ನು ಹುಡ್ಕೋದಿಂದ ಕೊಡಬೇಕು. ಕೆಲವು ಜಿಲ್ಲೆಗಳಲ್ಲಿ ಕೆಲವು ತಾಲ್ಲೂಕುಗಳಲ್ಲಿ 10 ಸಾವಿರ ಹುಡ್ಕೋದಿಂದ ಲೋನ್ ತೆಗೆದುಕೊಳ್ಳುತ್ತಾರೆ. ಅದರ ಬಗ್ಗೆ ಯುಟಿಲೈಸೇಶನ್ ಸರ್ಟಿಫಿಕೇಟ್ ಕೊಟ್ಟರೆ ಕೂಡಲೇ ಅದನ್ನು ಮಾಡಿಸಿಕೊಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಅಧ್ಯಕ್ಷರೇ, ಇದಕ್ಕೆಲ್ಲಾ ಯಾರು ಜವಾಬ್ದಾರರು?

ಅಧ್ಯಕ್ಷರು:- ಜವಾಬ್ದಾರಿ ಸರ್ಕಾರದ್ದು.

ಶ್ರೀ ಕೆ.ಎಸ್. ಈಶ್ವರಪ್ಪ:- ಹುಡ್ಕೋದಿಂದ ತರುತ್ತೀರೋ, ಎಲ್ಲಿಂದ ತರುತ್ತೀರೋ ನಮಗೆ ಗೊತ್ತಿಲ್ಲ. ನೀವು ಮಾಡುತ್ತೀರೋ ಮಾಡುವುದಕ್ಕೆ ಆಗುವುದಿಲ್ಲವೋ ಅದನ್ನು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅಧ್ಯಕ್ಷರೇ .....

(ಗೋಂದಲ)

ಅಧ್ಯಕ್ಷರು:- ರೆಡ್ಡಿಯವರಿಗೆ ಒಂದು ಅವಕಾಶ ಕೊಡಿ. ಅವರ ಪಾರ್ಟಿಗೆ ಅವರು ಒಬ್ಬರೇ ಒಬ್ಬರು ಮೆಂಬರು. ಪ್ರಜಾಪ್ರಭುತ್ವದಲ್ಲಿ ಪಾಪ, ಅವರಿಗೂ ಒಂದು ಅವಕಾಶ ಕೊಡಬೇಕಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- 1996-97ರಲ್ಲಿ ಮಂಡಲ್ ಪಂಚಾಯತಿಗಳಿಗೆ ಅಂಬೇಡ್ಕರ್ ಯೋಜನೆಯಲ್ಲಿ ಮನೆಗಳನ್ನು ಕೊಟ್ಟರು. ಆದರೆ ಇದುವರೆಗೂ ಹಣ ಕೊಟ್ಟಿಲ್ಲ. ಅದು ಯಾವಾಗ ಕೊಡುತ್ತಾರೆಯೇ ಇಲ್ಲವೇ, ಅದಾದರೂ ಹೇಳಿಬಿಟ್ಟರೆ ಸಾಕು.

ಅಧ್ಯಕ್ಷರು:- ಬಂದ ಕೂಡಲೇ ಕೊಡುತ್ತಾರೆ. ಪ್ರಕಾಶ್‌ರವರೇ, ಈಗ ನೀವು ಸ್ವಲ್ಪ ನಮ್ಮ ನೆರವಿಗೆ ಬರಬೇಕು.

ಶ್ರೀ ಹೆಚ್.ಡಿ. ಬಸವರಾಜು:- ನನ್ನ ಕ್ಷೇತ್ರದಲ್ಲಿ ಅಪೂರ್ಣವಾಗಿರುವಂಥ ಮನೆಗಳು ಬಹಳಷ್ಟು ಇವೆ. ಆಶ್ರಯ ಯೋಜನೆಯಲ್ಲಿ ಹಣ ಮಂಜೂರು ಮಾಡುತ್ತೇವೆ ಎಂದು ಹೇಳಿದ್ದು ಇದುವರೆಗೂ ಮಾಡಿಲ್ಲ. ಅದು ಮಾಡುತ್ತಾರೋ ಇಲ್ಲವೋ, ಅದನ್ನು ಹೇಳಿ ಸಾಕಾಗಿದೆ ನಮಗೆ.

ಶ್ರೀ ವಾಟಾಳ್ ನಾಗರಾಜ್:- ಈಗ ಆಶ್ರಯ ಮನೆಗಳನ್ನು ಸರ್ಕಾರ ಪ್ರತಿ ಕ್ಷೇತ್ರದಲ್ಲಿ ಎಷ್ಟು ಕೊಡುತ್ತಾರೆ ಎನ್ನತಕ್ಕದ್ದು, ಅದರ ಹಂಚಿಕೆ ವಿಧಾನ, ಅದಕ್ಕೊಂದು ಸಮಿತಿ, ಅದಕ್ಕೆ ನಾವು ಅಧ್ಯಕ್ಷರು. ಆದ್ದರಿಂದ ಅದನ್ನು ನಾವು ಒಬ್ಬರೇ ಎಂದು ಹಂಚಬಹುದಾ? ಆ ಸಮಿತಿಗೆ

ಸದಸ್ಯತ್ವ ಮಾಡುತ್ತೇವೆ ಎಂದು ಹೇಳಿದರು, ಎಷ್ಟು ದಿವಸದಲ್ಲಿ ಮಾಡುವುದಕ್ಕೆ ಸಾಧ್ಯ? ಅದನ್ನು ಮಾಡುತ್ತಾರಾ? ಈ ಸದಸ್ಯತ್ವವನ್ನು ಮಾಡತಕ್ಕಂಥ ವಿಧಾನ ಏನು?

10.50 ಎ.ಎಂ.

ಅಧ್ಯಕ್ಷರು:- ಇದು ಮೂಲ ನೀತಿಗೆ ಸಂಬಂಧಪಟ್ಟ ಪ್ರಶ್ನೆ. ಇವರು ಕಳುಹಿಸಿರತಕ್ಕ ಪ್ರಶ್ನೆ ಹಣದ ಬಿಡುಗಡೆಗೆ ಮಾತ್ರ ಸೀಮಿತ. ತಾವು ಇವತ್ತು ರಾಜ್ಯಪಾಲರ ವಂನದನಾ ನಿರ್ಣಯದ ಮೇಲೆ ಭಾಷಣ ಮಾಡುವವರಿದ್ದೀರಿ. ಆಗ ಇದನ್ನು ಸವಿಸ್ತಾರವಾಗಿ ಪ್ರಸ್ತಾಪ ಮಾಡಿ ಮುಖ್ಯ ಮುಂತ್ರಿಗಳ ಕಡೆಯಿಂದಲೇ ಸರ್ಕಾರದ ನೀತಿಯನ್ನು ಸ್ಪಷ್ಟಪಡಿಸುತ್ತೇನೆ. ಈಗ ಮುಂದಿನ ಪ್ರಶ್ನೆಗೆ ಹೊರಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಅದರಲ್ಲಿ ಎಲ್ಲರೂ ಜನತಾ ದಳದವರೇ ಸದಸ್ಯರಾಗಿದ್ದಾರೆ. ಆಶ್ರಯ ಮನೆ ಹಂಚುವ ವಿಚಾರದಲ್ಲಿ, ಮಾನ್ಯ ಸಚಿವರಾದ ರೇವಣ್ಣನವರ ಬಗ್ಗೆ ನನಗೆ ಬಹಳ ಪ್ರೀತಿ ಇದೆ. ಆದರೆ, ಈ ಸಮಿತಿಯಲ್ಲಿ ನಿಮ್ಮ ಪಕ್ಷದವರನ್ನೇ ಮೂರು ಮೂರು ಜನ ತೆಗೆದುಕೊಂಡಿದ್ದೀರಿ. ಇದು ಆಗಬಾರದು. ದಯವಿಟ್ಟು ತಾವು ನಮ್ಮ ರಕ್ಷಣೆಗೆ ಬರಬೇಕು. ಈ ಆಶ್ರಯ ಸಮಿತಿಯನ್ನು ಕಾಡಿ ಬೇಡಿ, ರಚನೆ ಮಾಡಬೇಕೆಂದು ನಿರಂತರವಾಗಿ ನಾವು ಒತ್ತಾಯ ಮಾಡಿದ್ದಾಯಿತು. ಇದಕ್ಕೆ ಕೊನೆಗೆ ಮಾನ್ಯ ಪ್ರಕಾಶ್‌ರವರು, ರೇವಣ್ಣನವರೂ ಒಪ್ಪಿದರು. ಆದರೆ ಸದಸ್ಯತ್ವ ಮಾಡುವಾಗ, ಶಾಸಕರು ಹೇಳಿದ ಒಬ್ಬರನ್ನಾದರೂ ಸದಸ್ಯರನ್ನಾಗಿ ಮಾಡಿರುವುದಿಲ್ಲ ಮತ್ತು ಬರೀ ದಳದವರನ್ನೇ ಸದಸ್ಯರನ್ನಾಗಿ ಮಾಡಿರುತ್ತಾರೆ. ಆದ್ದರಿಂದ ಈ ಸಮಿತಿ ಜನತಾದಳ ಪಕ್ಷದ ಸಮಿತಿಯೇ? ತಾವು ಅಧ್ಯಕ್ಷರಾಗಿರುವುದು ಇಡೀ ಸದನಕ್ಕೆ, ದಯಮಾಡಿ ತಾವು ನಮಗೂ ರಕ್ಷಣೆ ಕೊಡಬೇಕು.

(ಗೋಂದಲ)

ಶ್ರೀ ಯು.ಆರ್. ಸಭಾಪತಿ:- 1995-96ನೇ ಸಾಲಿಗೆ ಈಗಾಗಲೇ ಹಣ ಬಿಡುಗಡೆ ಮಾಡಲಾಗಿದೆ. ಇನ್ನು ಯಾವುದೂ ಮಾಡುವುದು ಇಲ್ಲವೆಂಬ ಮಾತನ್ನು ಅವರು ಹೇಳಿದರು. 1994-95, 1995-96 ಮತ್ತು 1996-97 ಈ ಮೂರು ವರ್ಷಗಳಲ್ಲಿ ಅರ್ಧ ಅರ್ದ ಹಣ ಬಿಡುಗಡೆ ಮಾಡಿ, ಉಳಿದಂಥ ಮನೆಗಳು ಸಾಕಷ್ಟು ಇದೆ.

ಅಧ್ಯಕ್ಷರು:- ಅವರು ಹೇಳಿದ್ದನ್ನು ತಾವು ಕೇಳಿಸಿಕೊಳ್ಳಲಿಲ್ಲ. ಬಜೆಟ್‌ನಲ್ಲಿ ಎಷ್ಟು ಪ್ರಾವಿಷನ್ ಮಾಡಿದ್ದರೋ ಅಷ್ಟನ್ನೂ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಯು.ಆರ್. ಸಭಾಪತಿ:- ಮಂಜೂರಾತಿ ಮಾಡಿದ್ದು ಯಾವ ಆಧಾರದ ಮೇಲೆ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಹಾಗಾದರೆ, ಆ ಮನೆ ಕಟ್ಟಿರುವವರ ಗತಿ ಏನು ಸ್ವಾಮಿ? ಹಾಗಾದರೆ, ಮನೆ ಏಕೆ ಸ್ಯಾಂಕ್ಷನ್ ಮಾಡಿಕೊಟ್ಟರು? ಬಜೆಟ್ ಏಕೆ ಇಟ್ಟುಕೊಂಡರು? ಹಣ ಇಲ್ಲದೇ ಮಂಜೂರಾತಿ ಮಾಡಿದ್ದಾರೆಯೇ?

ಶ್ರೀ ಎಂ.ಪಿ. ಪ್ರಕಾಶ್:- ಅಧ್ಯಕ್ಷರೇ, 1994-95, 1995-96ನೇ ಸಾಲಿನಲ್ಲಿ ಅಪೂರ್ಣಗೊಂಡಿರತಕ್ಕ ಮನೆಗಳು ಯಾವುವಿವೆ, ಅವುಗಳನ್ನು ಮುಂದಿನ ಸಾಲಿನಲ್ಲಿ ಕೊಟ್ಟಿರತಕ್ಕ ಹಣದಲ್ಲಿ ಅಪೂರ್ಣಗೊಂಡಿರತಕ್ಕ ಮನೆಗಳನ್ನು ಮುಗಿಸಿ ತೆಗೆದುಕೊಳ್ಳಬೇಕೆಂದು ಆದೇಶ ಇದೆ. ಆ ಪ್ರಕಾರ ಆಗಿರತಕ್ಕಂತಾದ್ದರಲ್ಲಿ ಬಂದಿರತಕ್ಕ ಹಣವನ್ನು ಅಪೂರ್ಣಗೊಂಡಂಥ ಮನೆಗಳಿಗೆ ಉಪಯೋಗಿಸಿಕೊಳ್ಳಬೇಕು. ಆದರೆ, ಕೆಲವು ಕಡೆಗೆ ಏನಾಗಿದೆಯೆಂದರೆ, ಅಪೂರ್ಣಗೊಂಡಂಥ ಮನೆಗಳನ್ನು ಮುಕ್ತಾಯಗೊಳಿಸದೇ ಹೊಸ ಮನೆಗಳನ್ನು ತೆಗೆದುಕೊಂಡಿರತಕ್ಕ ಸಂದರ್ಭದಲ್ಲಿ ಸ್ವಲ್ಪ ತೊಂದರೆಯಾಗಿದೆ. ಅದಕ್ಕೆ ಮತ್ತೆ ಹಣ ಕೊಡಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್:- ಅಧ್ಯಕ್ಷರೇ, ಅನೇಕ ಸದಸ್ಯರ ಕ್ಷೇತ್ರಗಳಲ್ಲಿ ಸಮಸ್ಯೆ ಇರುವುದು ಅಪೂರ್ಣಗೊಂಡಿರುವ ಮನೆಗಳ ಫಲಾನುಭವಿಗಳಿಗೆ ಕಷ್ಟ. ಈಗ 1994-95, 1995-96ನೇ ಸಾಲಿಗೆ ಬಿಡುಗಡೆ ಮಾಡಿದ್ದೇವೆನೆಂದು ಒಂದು ಸಲ ಹೇಳುತ್ತೀರಿ. ಇನ್ನು ಬಿಡುಗಡೆ ಮಾಡಿಲ್ಲ, ಬಂದಿರತಕ್ಕ ಹಣದಲ್ಲಿ ಮುಂದಿನ ಸಾಲಿನಲ್ಲಿ ಕಂಪ್ಲೀಟ್ ಮಾಡುತ್ತೇವೆಂದು ಇನ್ನೊಂದು ಸಲ ಹೇಳುತ್ತಾರೆ. ಈಗ ಸದಸ್ಯರು ಅವರವರ ಕ್ಷೇತ್ರದಲ್ಲಿ ಎದುರಿಸತಕ್ಕ ಸಮಸ್ಯೆಗಳನ್ನು ಇಲ್ಲಿ ಹೇಳಿದ್ದಾರೆ. ಈ ಸದನದಲ್ಲಿ ನಮಗೆ ಒಂದು ನಿರ್ದಿಷ್ಟವಾದಂಥ ಉತ್ತರಬೇಕು. ಈ ಅಪೂರ್ಣಗೊಂಡಿರುವ ಮನೆಗಳನ್ನು ಯಾವಾಗ ಪೂರ್ಣಗೊಳಿಸುತ್ತೀರಿ? ಇದು ಬಹಳ ಮುಖ್ಯ.

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸುತ್ತೋಲೆ ಬಹಳ ಸ್ಪಷ್ಟವಾಗಿದೆ. 1994-95ನೇ ಸಾಲಿನಲ್ಲಿ ನಾವು ಗುರಿಯನ್ನು ದೊಡ್ಡದಾಗಿ ಇಟ್ಟುಕೊಂಡು ಅದಕ್ಕೆ ಹಣವನ್ನು ಹಿಂದಿನ ಸರ್ಕಾರದವರು ಬಿಡುಗಡೆ ಮಾಡಿರಲಿಲ್ಲ. 1995-96ನೇ ಸಾಲಿನಲ್ಲಿ ಹಣ ಕೊಟ್ಟಾಗ ಅಪೂರ್ಣಗೊಂಡಿರತಕ್ಕ ಮನೆಗಳನ್ನು ಪೂರ್ಣಮಾಡಬೇಕೆಂಬ ಒತ್ತಾಯ ಇದ್ದುದ್ದರಿಂದ, ಬಂದಿರುವಂಥ ಹಣವನ್ನು ಅಪೂರ್ಣಗೊಂಡಿರತಕ್ಕ ಮನೆಗಳನ್ನು 1994-95ನೇ ಸಾಲಿನವುಗಳನ್ನು, ಅದ್ಯತೆ ಮೇಲೆ ಮೊದಲು ಮುಗಿಸಿ 2ನೇ ಪಟ್ಟಿಯನ್ನು ತೆಗೆದುಕೊಳ್ಳಬೇಕೆಂಬ ಆದೇಶ ಸುತ್ತೋಲೆಯಲ್ಲಿ ಸ್ಪಷ್ಟವಾಗಿದೆ. ಆದರೂ ಕೂಡ ಅದಕ್ಕೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಆದರೆ, ಕೆಲವು ಕಡೆ ಶಾಸಕರ ಒತ್ತಡ ಅಥವಾ ಬೇರೆಯವರ ಒತ್ತಡದಿಂದಲೋ ಹೊಸ ಮನೆಗಳನ್ನೂ ತೆಗೆದುಕೊಂಡಿದ್ದಾರೆ. ಹಾಗಾಗಿ ಸ್ವಲ್ಪ ಕಡೆಗೆ ತೊಂದರೆಯಾಗಿರುವಂತಾದ್ದು ನಿಜ. ಇದರ ಬಗ್ಗೆ ಮತ್ತೆ ಸ್ಪಷ್ಟೀಕರಣ ಕೊಡುವುದಾಗಿದ್ದರೆ, ತಮ್ಮಲ್ಲಿ ಬಂದು ಆ ಸುತ್ತೋಲೆಗಳನ್ನು ಮತ್ತು ಹಣ ಕೊಡತಕ್ಕಂತಾದ್ದನ್ನು ಕೂಡ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:- 1994-95, 1995-96ರಲ್ಲಿ ಅಪೂರ್ಣಗೊಂಡಿರುವ ಮನೆಗಳಿಗೆ ಹಣ ಬಿಡುಗಡೆ ಮಾಡಲಿಲ್ಲ. ಯಾವಾಗ ಹಣ ಬಿಡುಗಡೆ ಮಾಡುತ್ತಾರೆಂಬುದನ್ನು ಸ್ಪಷ್ಟಮಾಡಲಿ.

ಅಧ್ಯಕ್ಷರು:- ಇದು ಪ್ರಶ್ನೋತ್ತರ. ನೀವು ಪ್ರಶ್ನೆ ಕೇಳುವುದು, ಅವರು ಉತ್ತರ ಹೇಳುವುದು ಮುಂದುವರಿಯುತ್ತದೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ:- ಹಿಂದಿನ ಸರ್ಕಾರದವರು ಮನೆಗಳನ್ನು ಪೂರ್ತಿ ಮಾಡಲೇ ಇಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಣ ಕೊಟ್ಟರು, ಅಪೂರ್ಣವಾದ ಮನೆಗಳನ್ನು ಪೂರ್ಣ ಮಾಡುವಾಗ ಹಣ ಖರ್ಚಾಗಿರುತ್ತದೆ.

ಅಧ್ಯಕ್ಷರು:- ದಯಮಾಡಿ ಎಲ್ಲ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಇದು ಪ್ರಶ್ನೋತ್ತರ ಕಾಲ. ಒಂದು ಪ್ರಶ್ನೆಗೆ ಇಷ್ಟೊಂದು ಸಮಯ ಕೊಡುವುದರಿಂದ ನನಗೆ ತೊಂದರೆಯಾಗುತ್ತದೆ. ಉಳಿಕೆ ಪ್ರಶ್ನೆಗಳನ್ನು ಮುಗಿಸಬೇಕಾಗಿದೆ. ಎಲ್ಲಾ ಸದಸ್ಯರೂ ಕೂಡ, ವಿಶೇಷವಾಗಿ ವಿರೋಧಪಕ್ಷದ ಕಡೆಯಿಂದ ಎದ್ದಂಥವರು ತಮ್ಮ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದೀರಿ. ಯಾರು ಯಾರೂ ಏನೇನು ಹೇಳಿದ್ದೀರಿ ಎಂಬುದು ನನ್ನ ಗಮನಕ್ಕೆ ಬಂದಿದೆ. ನಾನು ಸನ್ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಮತ್ತು ವಸತಿ ಸಚಿವರ ಜೊತೆ ಚರ್ಚೆ ಮಾಡುತ್ತೇನೆ, ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡತಕ್ಕ ಸನ್ನಿವೇಶದಲ್ಲಿ, ಈ ಎಲ್ಲಾ ಸಮಸ್ಯೆಗಳಿಗೂ ಕೂಡ ಮುಖ್ಯಮಂತ್ರಿಗಳೇ ಸರ್ಕಾರದ ಪರವಾಗಿ ಸವಿಸ್ತಾರವಾಗಿ ಉತ್ತರ ಕೊಡುವಂಥ ವ್ಯವಸ್ಥೆ ಮಾಡಿಸುತ್ತೇನೆ. ಈ ಪ್ರಶ್ನೆಗೆ ಈಗಾಗಲೇ 7 ನಿಮಿಷಕ್ಕಿಂತ ಹೆಚ್ಚಾಗಿ ತೆಗೆದುಕೊಳ್ಳಲಾಗಿದೆ.

ಶ್ರೀ ಡಿ.ಆರ್. ಪಾಟೀಲ್:- ಮನೆ ಹಂಚಿಕೆ 40 ಸಾವಿರ ಏನು ಮಾಡಿದ್ದಾರೆ, ಇದರಲ್ಲಿ ಹಾಸನಕ್ಕೆ 3600, ಬೆಂಗಳೂರಲ್ಲಿ 3320, ಬಿಜಾಪುರ 1800, ರಾಯಚೂರಿಗೆ 1600, ಧಾರವಾಡಕ್ಕೆ 3100, ಕೋಲಾರಕ್ಕೆ 3 ಸಾವಿರ ಈ ರೀತಿ ತಾರತಮ್ಯವಾದರೆ, ನಮ್ಮ ಜಿಲ್ಲೆ ಸಣ್ಣದೇ. ಈ ತಾರತಮ್ಯ 1997-98ನೇ ಹಣಕಾಸಿನ ವರ್ಷದೊಳಗೆ ಇರುವುದಿಲ್ಲವೆಂಬ ಭಾವನೆ ಮಾನ್ಯ ಸಚಿವರಿಂದ ಬರಬೇಕು.

ಅಧ್ಯಕ್ಷರು:- ಈ ಎಲ್ಲಾ ಇಷ್ಯೂಸ್‌ಗಳನ್ನು ಕವರ್ ಮಾಡಿ, ಮುಖ್ಯ ಮಂತ್ರಿಗಳು ಉತ್ತರ ಕೊಡುವ ಹಾಗೆ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:- 1996-97ನೇ ಸಾಲಿನಲ್ಲಿ ಪ್ರತಿ ತಾಲ್ಲೂಕಿಗೆ ಆಶ್ರಯ ಯೋಜನೆಯಲ್ಲಿ 175-175 ಮನೆಗಳನ್ನು ಕೊಟ್ಟಿರುತ್ತೇವೆ. ಯಾವ ತಾಲ್ಲೂಕಿಗೂ ನಾವು ತಾರತಮ್ಯ ಮಾಡಿಲ್ಲ, ಬೇಕಾದರೆ ಸುತ್ತೋಲೆ ತೆಗೆಸಿ ನೋಡಿ.

ಶ್ರೀ ಡಿ.ಆರ್. ಪಾಟೀಲ್:- ಅವರು ಕೊಟ್ಟ ಅಂಕಿಯನ್ನೇ ನಾನು ಕೊಟ್ ಮಾಡಿರುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:- ಗ್ರಾಮೀಣ ಪ್ರದೇಶಗಳಿಗೆ ಜನಸಂಖ್ಯೆ ಆಧಾರದ ಮೇಲೆ ಕೊಟ್ಟಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್:- ಈ ವರ್ಷ, ಈ ರೀತಿಯ ಅನ್ಯಾಯವಾಗುವುದಿಲ್ಲವೆಂದು ಹೇಳಿದರೆ ಸಾಕು, ಈಗ ಮುಖ್ಯಮಂತ್ರಿಗಳೂ ಬಂದಿದ್ದಾರೆ.

ಅಧ್ಯಕ್ಷರು:- ಈ ಇಶ್ಯೂ ಕೂಡ ಸೇರಿಸಿ, ಉತ್ತರ ಕೊಡುವಂತೆ ಹೇಳುತ್ತೇನೆ, ಈಗ ಮುಂದಿನ ಪ್ರಶ್ನೆ.

ಬನ್ನೂರು ಕ್ಷೇತ್ರಕ್ಕೆ ಬಸ್ಸುಗಳ ಸಂಚಾರ

56 (200) ಶ್ರೀ ಎಸ್.ಕೃಷ್ಣಪ್ಪ (ಬನ್ನೂರು):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬನ್ನೂರು ಕ್ಷೇತ್ರಕ್ಕೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಹೊಸದಾಗಿ ಎಷ್ಟು ಬಸ್‌ನ್ನು ಹಾಕಲಾಗಿದೆ. ಆ ಬಸ್ಸುಗಳ ಮಾರ್ಗಗಳಾವುವು?

ಆ) ನಿಗದಿತ ಕಾಲಕ್ಕೆ ಆ ಬಸ್ಸುಗಳು ಸಂಚರಿಸುತ್ತಿವೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ಬನ್ನೂರು ಕ್ಷೇತ್ರದಲ್ಲಿ ಮೂರು (3) ಬಸ್‌ಗಳನ್ನು ಕೆಳಕಂಡ ಮಾರ್ಗಗಳಲ್ಲಿ ಜುಲೈ 1997ರಿಂದ ಕಾರ್ಯಾಚರಣೆಗೊಳಿಸಲಾಗುತ್ತಿದೆ.

1. ಕನಕಪುರ-ಮೈಸೂರು ಮಾರ್ಗ ಬನ್ನೂರು
2. ಮೈಸೂರು-ಮಳವಳ್ಳಿ ಮಾರ್ಗ ಬನ್ನೂರು
3. ಮೈಸೂರು-ಬನ್ನೂರು-ದರ್ಗಾ
4. ಬನ್ನೂರು-ಮಂಡ್ಯ
5. ಮೈಸೂರು-ಮಂಡ್ಯ ಮಾರ್ಗ ಬನ್ನೂರು
6. ಮೈಸೂರು-ಬನ್ನೂರು ಮಾರ್ಗ ರಂಗಸಮುದ್ರ.

ಆ) ಹೌದು.

ಶ್ರೀ ಎಸ್. ಕೃಷ್ಣಪ್ಪ:- ಮಾನ್ಯ ಸಭಾಧ್ಯಕ್ಷರೇ, ನಾನು ಕಳುಹಿಸಿದ ಪ್ರಶ್ನೆ, ನಮ್ಮ ಕ್ಷೇತ್ರದಲ್ಲಿ ಭಾಗಶಃ ರಾಷ್ಟ್ರೀಕೃತವಾದಂಥ ಕ್ಷೇತ್ರ. ಬಹುಶಃ ಅಲ್ಲಿಂದ ರಾಷ್ಟ್ರೀಕರಣವಾಗದೇ ಇರತಕ್ಕ ರೂಟ್‌ಗಳಿಗೆ ಮೂರು ಬಸ್ಸುಗಳನ್ನು ಹಾಕಿಕೊಡಬೇಕೆಂದು ಸಾರಿಗೆ ಸಚಿವರಿಂದ ಶಿಫಾರಸ್ ಮಾಡಿಸಿ, ಕಳುಹಿಸಿಕೊಟ್ಟಿದ್ದೆ. ಅವರು ಕರೆದಂಥ ಸಂದರ್ಭದಲ್ಲಿ ನಾನು ಕೆಲವು ಸಲಹೆಗಳನ್ನು ಕೂಡ ಕೊಟ್ಟಾಗ, ಬಸ್ಸುಗಳನ್ನು ಹಾಕಿಸಿಕೊಡುತ್ತೇನೆಂಬ ಮಾತನ್ನು ಹೇಳಿದರು. ಇಲ್ಲಿ ಜುಲೈ 1997 ರಿಂದ 6 ಬಸ್ಸುಗಳನ್ನು ಹಾಕಿದ್ದೇವೆಂದು ಹೇಳಿದ್ದಾರೆ. ಇದು ರಾಷ್ಟ್ರೀಕರಣ ಮಾರ್ಗದಲ್ಲಿ ಟ್ರಾಫಿಕ್ ಜಾಸ್ತಿಯಾಗಿ ಹಾಕಿರತಕ್ಕಂಥದ್ದು, ಆದರೆ, ನಾನು ಕೇಳಿರತಕ್ಕಂಥ ಪ್ರಶ್ನೆ ದೇಶವಳ್ಳಿ,